**OFFICE OF THE REGISTRAR GENERAL, HIGH COURT OF KARNATAKA**
**HIGH COURT BUILDINGS, BENGALURU 560 001.**

**NOTIFICATION NO: HCE 145/2016 DATED 16.10.2017**

# RECRUITMENT OF CANDIDATES FOR THE POST OF TRANSLATORS

**LAST DATE FOR SUBMISSION OF APPLICATION THROUGH ONLINE: 15.11.2017**

Online applications in the prescribed format are invited from applicants who are qualified as on the last date fixed for submission of applications for recruitment to **10 Posts** of Translators on the establishment of the High Court of Karnataka, Bengaluru, through online link on **http://karnatakajudiciary.kar.nic.in/recruitment.asp**

**1. Method of Recruitment:** Selection of candidates will be made in accordance with the High Court of Karnataka Service (Conditions of Service and Recruitment) Rules, 1973, (IV Amendment) Rules, 2017.

**2. Method of Recruitment Process:**

| | | |
|---|---|---|
| 1 | **Translators** | **Eligibility for Appointment**:-<br>Appointment shall be by direct recruitment after calling for applications from candidates who have passed Master Degree in English at least in second class with Kannada as one of the languages in Bachelor degree. The candidates must have passed in such Bachelor Degree (with kannada as one of the languages) at least in second class.<br>Note: Degree/Master Degree must have been obtained through regular course and not through correspondence course.<br>(a) **Written Test:-** The Candidates whose applications are in order shall be called for written test.<br>(b) **Viva-voce:-** Out of the candidates who are successful in the written test, such candidates in the ratio of 1:10 in the order of merit in each category shall be called for viva-voce. |

**Contd...**

**3. Scale of Pay:** Rs.21600 – 600 – 24600- 700 – 28800 – 800 – 33600 – 900 – 39000 – 1050 – 40050.

**4**. **Probation:** The candidate if appointed shall be initially on probation for a period of two years or for extended period if necessary.

**5. Age limit: (1)** As on the last date of submission of application, the age limit is, minimum of 18 years for all categories and the maximum age limit is as under:-

**(a)** 40 years in the case of a person belonging to Scheduled Caste or Scheduled Tribe or Category-I of other Backward Classes.

**(b)** 38 years in the case of a person belonging to Category II-A or II-B or III-A or III–B of other Backward Classes; and

**(c)** 35 years for others.

**(2)** As per Rule 6 of the Karnataka Civil Services (General Recruitment) Rules, 1977, the maximum age limit for appointment as mentioned in the said rules will be enhanced to the extent mentioned in the following cases:-

**i.** In case of candidate who is working or holding a post under the Government or a local authority or a Corporation established by a State Act or Central Act or established by the Government under a State Act or Central Act and owned or controlled by the Government by the number of years during which he/she is or was holding such post or ten years whichever is less;

**ii.** In case of candidate who is an ex-serviceman - by three years plus the number of years of service rendered by him in the Armed Forces of the Union;

**iii.** In case of a candidate who is physically handicapped - by ten years;

**iv.** In the case of a candidate who is widow - by ten years;

**(3)** The minimum and maximum age limit will be as on the **last Date fixed for applying online i.e, 15.11.2017.**

**Contd...**

**6. Classification of Vacancies:**

**<u>09 POSTS UNDER RESIDUAL PARENT CADRE</u>**

| | Women Candidates | Rural Candidates | Physically Handicapped | Ex-servicemen | Kannada Medium | Displaced by Project | Unreserved | Total |
|---|---|---|---|---|---|---|---|---|
| **Scheduled Caste** | 1 | - | - | - | - | - | 1 | 2 |
| **Scheduled Tribe** | - | - | - | - | - | - | 1 | 1 |
| **Category I** | - | - | - | - | - | - | 1 | 1 |
| **Category-II (A)** | - | - | - | - | - | - | 1 | 1 |
| **General Merit** | 1 | 1 | 1 | - | - | - | 1 | 4 |
| **Total** | **2** | **1** | **1** | **-** | **-** | **-** | **5** | **09** |

**1 POST UNDER LOCAL CADRE (i.e., RESERVATION FOR HYDERABAD KARNATAKA REGION CANDIDATES UNDER ARTICLE 371(J) OF THE CONSTITUTION)**

| | Women Candidates | Rural Candidates | Physically Handicapped | Ex-servicemen | Kannada Medium | Displaced by Project | Unreserved | Total |
|---|---|---|---|---|---|---|---|---|
| **Scheduled Caste** | - | - | - | - | - | - | 1 | 1 |
| **Total** | **-** | **-** | **-** | **-** | **-** | **-** | **1** | **1** |

**Contd....**

**7. Mode of Selection Process:** To assess the suitability of the candidates for appointment to the said posts, selection shall be held in the following manner:-

| Sl. No. | Particulars | Maximum Marks | Minimum Marks for passing others (GM, Cat-I, IIA, IIB, IIIA & IIIB) | Minimum Marks for passing the test (SC & ST) |
|---|---|---|---|---|
| 1. | **Written Test**<br><br>**PAPER-I**<br><br>Test of Knowledge of Language (English & Kannada) | 100 | 60 | 50 |
| | **PAPER-II**<br><br>Test of Knowledge of Translation:-<br><br>(Kannada to English) & (English to Kannada) | 100 | 60 | 50 |
| 2. | Viva – voce | 50 | 25 | 20 |
| **Grand Total** | | **250 Marks** | **145 Marks** | **120 Marks** |

## SYLLABUS AND DURATION OF WRITTEN TEST

The following syllabus is prescribed for the written test to be conducted in 2 papers namely Paper-I and Paper-II:

**Contd....**

**PAPER-I (3 Hours)**

## TEST OF KNOWLEDGE OF LANGUAGE

### Unit-I: Knowledge of English Language

1. Knowledge of idioms and phrases of English language.
2. Knowledge of synonyms and antonyms of English language.
3. Knowledge of common errors that appear in the usage and application of English language.
4. Knowledge of new trends and concepts appearing in the usage of English language.
5. Knowledge of administrative terminologies of English language.
6. Knowledge of legal terminologies of English language.

### Unit-II: Knowledge of Kannada Language

1. Knowledge of idioms and phrases of Kannada language.
2. Knowledge of synonyms and antonyms of Kannada language.
3. Knowledge of common errors that appear in the usage and application of Kannada language.
4. Knowledge of new trends and concepts appearing in the usage of Kannada language.
5. Knowledge of administrative terminologies of Kannada language.
6. Knowledge of legal terminologies of Kannada language.

### Unit-III: Knowledge of other Language terminologies being used in Kannada language

1. Knowledge of administrative terminologies of other languages being used in Kannada language.
2. Knowledge of legal and Judicial terminologies of other languages being used in Kannada language.

### Unit-IV: Basic Knowledge of Dictionaries given below:

1. Glossary of Administrative Terms
2. Legal Glossary
3. Medical Glossary
4. Agricultural Glossary
5. Glossary of Science and Technology
6. Environmental Dictionary
7. English-Kannada Dictionary & Kannada-English Dictionary and other important dictionaries.

**Contd....**

**PAPER-II (3 Hours)**

## Test of Knowledge of Translation

### Unit-I: Knowledge of legal language.

1. Knowledge of words, phrases, sentences and clauses of Kannada and English languages used in the Constitution of India and in some important Acts and Rules.

### Unit-II: Knowledge regarding translation of administrative matters of the Karnataka Government.

1. Knowledge regarding translation of matters pertaining to the proceedings of the Karnataka Legislature.

2. Knowledge regarding translation of matters pertaining to various departments of the Karnataka Government.

### UNIT-III: Knowledge regarding translation of Judicial Matters of High Court and Subordinate Courts of Karnataka.

1. Knowledge regarding translation of matters pertaining to the proceedings of High-Court and Subordinate courts of Karnataka.

2. Knowledge regarding translation of Judgments, Awards, Depositions, issues, charges and other orders of courts.

**8. Method of Application and fee:** The method of Application shall be through **online** on the website http://karnatakajudicary.kar.nic.in/recruitment.asp to be applied as per the instructions made available in the Annexure on the website. **Applications sent by any other mode other than online will not be considered.**

**Contd....**

**(a)** Candidates belonging to GM, II-A, II-B, III-A and III-B or other Backward Classes, shall remit an amount of **Rs.500/-(Rupees Five Hundred Only).** But, in the case of candidate belonging to SC/ST/Category-I and Physically Handicapped, the fee payable shall be **Rs.250/- (Rupees Two Hundred and fifty only).**

(i) **Online Payment:** On submission of online application, the candidates shall make the online payment of application fee by SBI online payment gateway mentioned in the online application.

**Or**

(ii) **Challan Form:** On submission of online application, the candidates shall download the challan through the SBI online payment gateway link mentioned in the online application in PDF format and shall remit the prescribed fee in any branch of SBI. (System need to support PDF reader-like Adobe, Acrobat)

**(b)** Fee once paid **shall** not be refunded under any circumstances.

**9. Last date for submission of application:-**

**(i)** To register / submit online application: **15.11.2017 (11:59 P.M.)**

**(ii)** For payment of fee through Online/Challan :**19.11.2017**

**10. Candidates Claiming Reservations:**

(a) Under SC/ ST, Category – I / II A / II B / III A / III B shall possess the certificate in the form as prescribed by the Government of Karnataka and issued by the competent Authority.

**Contd...**

(b) Claiming reservation under Rural /Physically Handicapped / Ex-Servicemen / Widow candidates shall posses the Certificates issued by Competent Authorities.

(c) Candidates claiming reservation under Local Cadre shall possess the relevant certificate issued by the Competent Authority on or before the last date of applying online as prescribed under the Karnataka Public Employment (Reservation in appointment for Hyderabad-Karnataka Region) (Issue of Eligibility Certificates) Rules, 2013.

(d) The candidates claiming benefits under Sl. No. 10 (a), (b) and (c) above shall possess the relevant certificates, issued by the Competent Authorities on or before the last date of applying on line.

(e) Candidates who are in service of Union of India / State Governments and their undertaking shall possess the **"No Objection Certificate"** issued by the concerned Authority and furnish at the time of verification of documents.

**11.** Candidates called for the document verification at the time of **Written Test/Viva-Voce** shall furnish the necessary original documents with regard to Educational Qualification (SSLC or equivalent examination certificate to show the Date of Birth), Degree and Master Degree Marks Cards and Convocation Certificates, Caste, reservations claimed with regard to Rural / Physically Handicapped / Widow and reservation claimed for "Local Cadre" for verification. **On verification**, **if the information so furnished by the applicant in the application is found to be false, then their candidature is liable for rejection and also they are liable for criminal prosecution for furnishing false information.**

**Contd...**

**12**. Candidates called for Written Tests/Viva-voce will have to appear for the same at their own cost.

**13.** The recruitment to the post of Translators is made for posting either at High Court of Karnataka Principal Bench at Bengaluru or Benches at Dharwad and Kalaburagi.

**14.** If any applicant is found to attempt / obtain extraneous support by any means for candidature from any officials or non-officials, he/she will not be eligible for appointment.

**BY ORDER OF HON'BLE THE CHIEF JUSTICE,**

**Sd/-**
**(B. JAYANTHA KUMAR),**
**REGISTRAR (RECRUITMENT)**

## **General Instructions to the Applicant**

1. Applicants shall read all the instructions carefully before submitting the applications, so as to avoid the mistakes.

2. Candidate must specifically indicate the Residual Parent Cadre/ Local cadre of reservation in the column earmarked in the application under which candidate would like to be considered. Further candidate is not permitted to change the Residual Parent Cadre/ Local cadre claimed in the application. (Local Cadre means Reservation to the candidates belonging to Hyderabad Karnataka Region)

3. The applicants shall provide the **Mobile number** and valid **E-mail Id (Compulsory),** for communication, at relevant columns while submitting online application. The authority is not responsible for non receipt of SMS or E-mail.

4. To avoid last minute rush, the applicants are advised to submit the online applications well in advance. The website will accept the applications round the clock upto 15.11.2017 till 11.59 p.m.

5. The decision of the High Court of Karnataka will be final, as to the **eligibility** for **Written Test** & **Viva-voce** or otherwise of an applicant.

6. Intimation will be sent to the eligible candidates through a SMS message to Cell phone and also an email will be sent to Email-Id, if provided. The list of short listed applicants will also be notified on the High Court of Karnataka website: **www.karnatakajudiciary.kar.nic.in/ recruitment.asp** for downloading the "Call- Letter". Applicant must bring his/her 'Call-Letter', at the time of appearing for the Tests / Viva Voce.

7. The Applicants shall have to appear for the **Written Test** and **Viva-Voce** if called for, at their **own expenses** at the place and time decided and notified by the High Court of Karnataka.

**Contd..**

8. The Applicants shall produce the copy of "**Call Letter" and "Identity Proof"** (Voter ID or Aadhaar Card or PAN Card or Driving License or Ration card or Passport in Original can be produced as a proof of identity) while appearing for the **Written Test / Viva Voce** for verification.

9. The applicants shall produce all the **original testimonials** with a **set of self attested photo copies** i.e., Mark Cards of SSLC/X Std., Graduation, Post Graduation, Caste Certificates, Certificates for claiming any reservations, 2 Passport size photographs and also Three Character certificates (one from last studied education institution and two from the respectable persons) while appearing for the **Written Test** & **Viva-voce** for scrutiny.

10. On the basis of marks obtained in **Written Test,** candidates will be short listed for **Viva voce**.

11. **Mere success** in the **Written Test** and/or **Viva-voce** shall not confer any **right to appointment** and no applicant shall be appointed to the post unless the High Court of Karnataka is satisfied, after such **inquiries** as may be considered necessary that the applicant is **suitable** in all respects for appointment to the post.

12. To avoid last minute rush, the applicants are advised to submit the ONLINE applications well in advance. The website will accept the applications round the clock till 11:59 p.m. of 15.11.2017.

    Last Dates:

    **(i)** To register / submit online application: **15.11.2017 (11:59 P.M.)**

    **(ii)** For payment of fee through Online/Challan :**19.11.2017**

13. The applicant shall pay the appropriate **Application Fee** as mentioned in the notification, either by mode of **online banking** or through **Online SBI Payment Portal download Challan form** as notified by the High Court of Karnataka. The fee shall be remitted at any branch of the State Bank of India (**SBI**).

**Contd..**

14. The Applicant shall scan his/her latest passport size **photograph** with white back ground (having **5 cm of length X 3.6 cm of breadth with max. size 50kb**) and signature on white paper in black ball point pen (having **2.5cm of length X 7.5 cm of breadth with max. size 25kb**) in **.jpg format and** upload the same, while submitting the **Online application.**

15. The applicants shall not upload any other original or attested copies of the documents/ certificates (except the above specified documents) at the stage of submitting the online application.

16. While applying online application for the post, the applicants shall ensure that he/she fulfils the **eligibility and other norms as mentioned above** and that all the particulars furnished by him/her are **correct** in all respects. In case it is detected at any stage of recruitment that a applicant does not fulfill the eligibility norms and/or that he/she has suppressed/twisted or truncated any material facts, his/her candidature will stand cancelled. If any of these shortcomings is detected even after appointment, his/her contract shall be liable to be terminated. Furnishing of wrong, incomplete or incorrect information would not only lead to disqualification but also liable for criminal prosecution.

**Sd/-**
**(B. JAYANTHA KUMAR),**
**REGISTRAR (RECRUITMENT)**

**<u>ಮಹಾವಿಲೇಖನಾಧಿಕಾರಿಯವರ ಕಛೇರಿ, ಕರ್ನಾಟಕ ಉಚ್ಚ ನ್ಯಾಯಾಲಯ,</u>**

**<u>ಅಂಬೇಡ್ಕರ್ ವೀದಿ, ಬೆಂಗಳೂರು–560 001</u>**

**<u>ಅಧಿಸೂಚನೆ ಸಂಖ್ಯೆ ಹೆಚ್.ಸಿ.ಇ. 145/2016 ದಿನಾಂಕ 16.10.2017</u>**

**<u>ಭಾಷಾಂತರಕಾರರ ಹುದ್ದೆಗಳಿಗಾಗಿ ಅಭ್ಯರ್ಥಿಗಳ ನೇಮಕಾತಿ</u>**

**ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15.11.2017**

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ **10 ಭಾಷಾಂತರಕಾರರ ಹುದ್ದೆಗಳಿಗೆ** ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕದ ಉಚ್ಚ ನ್ಯಾಯಾಲಯದ ವೆಬ್ ಸೈಟ್ **http://karnatakajudiciary.kar.nic.in/recruitment.asp** ಮೂಲಕ ಸಲ್ಲಿಸಲು ಆಹ್ವಾನಿಸಲಾಗಿದೆ.

**1. ನೇಮಕಾತಿ ವಿಧಾನ:**

ಅಭ್ಯರ್ಥಿಗಳ ನೇಮಕಾತಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಸೇವೆ ಮತ್ತು ನೇಮಕಾತಿ ಷರತ್ತುಗಳು) ನಿಯಮಗಳು, 1973 (4ನೇ ತಿದ್ದುಪಡಿ) ನಿಯಮಗಳು, 2017ರ ಪ್ರಕಾರ ಮಾಡಲಾಗುತ್ತದೆ.

**ನೇಮಕಾತಿ ವಿಧಾನದ ಪ್ರಕ್ರಿಯೆ:**

| | | |
|---|---|---|
| **1** | **ಭಾಷಾಂತರಕಾರರು** | **ನೇಮಕಾತಿಗಾಗಿ ಅರ್ಹತೆ:**<br>ನೇಮಕಾತಿಯು ನೇರ ನೇಮಕಾತಿಯಾಗಿದ್ದು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಿದ ತರುವಾಯ ಅಭ್ಯರ್ಥಿಗಳು ಆಂಗ್ಲಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಕನಿಷ್ಠ ಎರಡನೇ ದರ್ಜೆಯಲ್ಲಿ ಉತ್ತೀರ್ಣರಾಗುವುದರೊಂದಿಗೆ ಪದವಿಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು. ಅಭ್ಯರ್ಥಿಗಳು ಅಂತಹ ಪದವಿಯನ್ನು (ಕನ್ನಡವನ್ನು ಒಂದು ಭಾಷೆಯನ್ನಾಗಿ) ಕನಿಷ್ಠ ಎರಡನೇ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು.<br><br>ಸೂಚನೆ: ಪದವಿ/ಸ್ನಾತಕೋತ್ತರ ಪದವಿಯನ್ನು ನಿಯತವಾಗಿ ಅಧ್ಯಯನ ಮಾಡಿರಬೇಕು ಮತ್ತು ಯಾವುದೇ ದೂರ ಶಿಕ್ಷಣ ಪದವಿಯನ್ನು ಅಂಗೀಕರಿಸಲಾಗುವುದಿಲ್ಲ.<br><br>(ಅ) **ಲಿಖಿತ ಪರೀಕ್ಷೆ:** ಅರ್ಜಿಗಳು ಕ್ರಮಬದ್ಧವಾಗಿರುವ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಆಹ್ವಾನಿಸತಕ್ಕದ್ದು.<br>(ಆ) **ಮೌಖಿಕ ಸಂದರ್ಶನ:** ಲಿಖಿತ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು 1:10ರ ಅನುಪಾತದಲ್ಲಿ ಪ್ರತೀ ಪ್ರವರ್ಗದಲ್ಲಿನ ಅರ್ಹತೆ ಆಧಾರದಲ್ಲಿ ಮೌಖಿಕ ಪರೀಕ್ಷೆಗೆ ಕರೆಯತಕ್ಕದ್ದು. |

**ಮುಂದುವರಿದಿದೆ..**

3. **ವೇತನ ಶ್ರೇಣಿ:** ರೂ. 21600 – 600 – 24600 – 700 – 28800 – 800 – 33600 – 900 – 39000 – 1050 – 40050

4. **ಅರ್ಹತಾ ಪರೀಕ್ಷಣೆ ಅವಧಿ :** ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರೀಕ್ಷಣಾರ್ಥಿಗಳಾಗಿರುತ್ತಾರೆ.

5. **ವಯೋಮಿತಿ:** (1) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಸಲಾದ ಕೊನೆಯ ದಿನಾಂಕದಂದು ಎಲ್ಲಾ ಪ್ರವರ್ಗದವರಿಗೆ ಕನಿಷ್ಠ 18 ವರ್ಷದವರಾಗಿರಬೇಕು ಮತ್ತು ಗರಿಷ್ಠ ವಯೋಮಿತಿ ಈ ಕೆಳಕಂಡಂತೆ ಇರತಕ್ಕದ್ದು:

(ಎ) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೇ ಹಿಂದುಳಿದ ಜಾತಿಗಳ ಪ್ರವರ್ಗ–1ಕ್ಕೆ ಸೇರಿದ ಪಕ್ಷದಲ್ಲಿ ಅವರು ಗರಿಷ್ಠ 40 ವರ್ಷ ವಯಸ್ಸು ಮೀರಿರಬಾರದು.

(ಬಿ) ಇತರೇ ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಅಥವಾ '2ಬಿ' ಅಥವಾ '3ಎ' ಅಥವಾ '3ಬಿ'ಗೆ ಸೇರಿದ್ದಲ್ಲಿ ಗರಿಷ್ಠ 38 ವರ್ಷ ವಯಸ್ಸು ಮೀರಿರಬಾರದು; ಮತ್ತು

(ಸಿ) ಇತರೇ ಅಭ್ಯರ್ಥಿಗಳು 35 ವರ್ಷ ವಯಸ್ಸು ಮೀರಿರಬಾರದು.

(2) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಅನುಸಾರ ಈ ಕೆಳಗಿನ ಸಂದರ್ಭಗಳಲ್ಲಿ ಸದರಿ ನಿಯಮಗಳಲ್ಲಿ ನಿಗಧಿ ಪಡಿಸಿರುವ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು:

(i) ಅಭ್ಯರ್ಥಿಯು, ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಅಥವಾ ರಾಜ್ಯ ಅಥವಾ ಕೇಂದ್ರ ಅಧಿನಿಯಮದ ಅಡಿಯಲ್ಲಿ ಸರ್ಕಾರದ ಮೂಲಕ ಸ್ಥಾಪಿತವಾದ ಮತ್ತು ಸರ್ಕಾರದ ಅಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಕ್ಷದಲ್ಲಿ ಅಥವಾ ಯಾವುದೇ ಹುದ್ದೆಯನ್ನು ಹೊಂದಿದ್ದಲ್ಲಿ ಹಾಗೆ ಸಲ್ಲಿಸಿರುವ ಅವಧಿ ಅಥವಾ 10 ವರ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿಯ ಸಡಿಲಿಕೆಗೆ ಅರ್ಹರಾಗಿರುತ್ತಾರೆ.

**ಮುಂದುವರಿದಿದೆ..**

(ii) ಮಾಜಿ ಸೈನಿಕರಿಗೆ, ಕೇಂದ್ರ ಸಶಸ್ತ್ರ ಪಡೆಯಲ್ಲಿ ಅವರು ಸೇವೆ ಸಲ್ಲಿಸಿದ ಅವಧಿಯ ವರ್ಷಗಳ ಜೊತೆಗೆ ಮೂರು ವರ್ಷಗಳು ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

(iii) ಅಭ್ಯರ್ಥಿಯು ದೈಹಿಕ ಅಂಗವಿಕಲತೆ ಹೊಂದಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

(iv) ಅಭ್ಯರ್ಥಿಯು ವಿಧವೆಯಾಗಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

(3) ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾದ **ಕೊನೆಯ ದಿನಾಂಕವನ್ನು ಆಧರಿಸಿರುತ್ತದೆ. ಅಂದರೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15.11.2017**

**6. ಖಾಲಿ ಹುದ್ದೆಗಳ ವರ್ಗೀಕರಣ :**

**ಮೂಲವೃಂದದ 9 ಹುದ್ದೆಗಳು**

| ಪ್ರವರ್ಗ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲರು | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತರು | ಸಾಮಾನ್ಯ | ಒಟ್ಟು |
|---|---|---|---|---|---|---|---|---|
| **ಪರಿಶಿಷ್ಟ ಜಾತಿ** | **1** | **–** | **–** | **–** | **–** | **–** | **1** | **2** |
| **ಪರಿಶಿಷ್ಟ ಪಂಗಡ** | **–** | **–** | **–** | **–** | **–** | **–** | **1** | **1** |
| **ಪ್ರವರ್ಗ–I** | **–** | **–** | **–** | **–** | **–** | **–** | **1** | **1** |
| **ಪ್ರವರ್ಗ – II**(ಎ) | **–** | **–** | **–** | **–** | **–** | **–** | **1** | **1** |
| **ಸಾಮಾನ್ಯ** | **1** | **1** | **1** | **–** | **–** | **–** | **1** | **4** |
| **ಒಟ್ಟು** | **2** | **1** | **1** | **–** | **–** | **–** | **5** | **9** |

**ಮುಂದುವರಿದಿದೆ..**

**ಸ್ಥಳೀಯ ವೃಂದಗಳ 1 ಹುದ್ದೆ (ಅಂದರೆ ಸಂವಿಧಾನದ 371–(ಜೆ) ಅನುಚ್ಛೇದದಡಿಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಾತಿ)**

| ಪ್ರವರ್ಗ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲರು | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತರು | ಸಾಮಾನ್ಯ | ಒಟ್ಟು |
|---|---|---|---|---|---|---|---|---|
| **ಪರಿಶಿಷ್ಟ ಜಾತಿ** | – | – | – | – | – | – | **1** | **1** |
| **ಒಟ್ಟು** | – | – | – | – | – | – | **1** | **1** |

**7. ಆಯ್ಕೆ ಪ್ರಕ್ರಿಯೆ ವಿಧಾನ:** ಸದರಿ ಹುದ್ದೆಗಳ ನೇಮಕಾತಿಗಾಗಿ ಸೂಕ್ತ ಅಭ್ಯರ್ಥಿಗಳನ್ನು ನಿರ್ಧರಿಸುವುದಕ್ಕೆ, ಆಯ್ಕೆಯು ಈ ಮುಂದಿನ ರೀತಿಯಲ್ಲಿ ಹೊಂದಿರತಕ್ಕದ್ದು.

| ಕ್ರಮ ಸಂಖ್ಯೆ | ವಿವರಗಳು | ಗರಿಷ್ಠ ಅಂಕಗಳು | ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪಡೆಯಬೇಕಾದ ಕನಿಷ್ಠ ಅಂಕಗಳು (ಸಾಮಾನ್ಯ ಅಭ್ಯರ್ಥಿ, ಪ್ರವರ್ಗ–I, IIಎ, IIಬಿ, IIIಎ ಮತ್ತು IIIಬಿ) ಕನಿಷ್ಠ ಅಂಕಗಳು | ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪಡೆಯಬೇಕಾದ ಕನಿಷ್ಠ ಅಂಕಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ) |
|---|---|---|---|---|
| 1 | ಲಿಖಿತ ಪರೀಕ್ಷೆ<br>**ಪತ್ರಿಕೆ – I**<br>ಭಾಷಾಜ್ಞಾನ ಪರೀಕ್ಷೆ<br>(ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ) | 100 | 60 | 50 |
| | **ಪತ್ರಿಕೆ – II**<br>ಭಾಷಾಂತರ ಪರೀಕ್ಷೆ<br>(ಕನ್ನಡ ಭಾಷೆಯಿಂದ ಆಂಗ್ಲ ಭಾಷೆಗೆ)<br>ಮತ್ತು<br>(ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ) | 100 | 60 | 50 |
| 2 | ಮೌಖಿಕ ಸಂದರ್ಶನ | 50 | 25 | 20 |
| | ಒಟ್ಟು | **250** ಅಂಕಗಳು | **145** ಅಂಕಗಳು | **120** ಅಂಕಗಳು |

**ಮುಂದುವರಿದಿದೆ..**

## ಪಠ್ಯ ವಿಷಯ ಮತ್ತು ಲಿಖಿತ ಪರೀಕ್ಷೆಯ ಅವಧಿ

ಈ ಮುಂದಿನ ಪಠ್ಯಕ್ರಮಗಳನ್ನು, ಕ್ರಮವಾಗಿ ಪತ್ರಿಕೆ–I ಮತ್ತು ಪತ್ರಿಕೆ–II ಎಂದು 2 ವಿಷಯಗಳಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸುವುದಕ್ಕಾಗಿ ನಿಗದಿಪಡಿಸಲಾಗಿದೆ.

## ಪತ್ರಿಕೆ 1 (3 ಗಂಟೆಗಳು)

### ಭಾಷಾಜ್ಞಾನದ ಪರೀಕ್ಷೆ
### ಘಟಕ– I ಆಂಗ್ಲಭಾಷಾ ಜ್ಞಾನ

1. ಆಂಗ್ಲ ಭಾಷೆಯ ನುಡಿಗಟ್ಟುಗಳ ಮತ್ತು ಪದಗುಚ್ಛಗಳ ಜ್ಞಾನ
2. ಆಂಗ್ಲ ಭಾಷೆಯ ಸಮಾನಾರ್ಥಕ ಹಾಗೂ ವಿರುದ್ಧ ಪದಗಳ ಜ್ಞಾನ
3. ಆಂಗ್ಲ ಭಾಷೆಯ ಬಳಕೆಯಲ್ಲಿ ಮತ್ತು ಅನ್ವಯಿಕೆಯಲ್ಲಿ ಕಂಡುಬರುವ ಸಾಮಾನ್ಯ ದೋಷಗಳ ಜ್ಞಾನ
4. ಆಂಗ್ಲ ಭಾಷೆಯ ಬಳಕೆಯಲ್ಲಿ ಕಂಡುಬರುವ ಹೊಸ ಪ್ರವೃತ್ತಿಗಳು ಹಾಗೂ ಪರಿಕಲ್ಪನೆಗಳ ಬಗೆಗಿನ ಜ್ಞಾನ
5. ಆಂಗ್ಲ ಭಾಷೆಯ ಆಡಳಿತಾತ್ಮಕ ಪರಿಭಾಷೆಗಳ ಜ್ಞಾನ
6. ಆಂಗ್ಲ ಭಾಷೆಯ ಕಾನೂನು ಪರಿಭಾಷೆಗಳ ಜ್ಞಾನ

### ಘಟಕ– II ಕನ್ನಡ ಭಾಷೆಯ ಜ್ಞಾನ

1. ಕನ್ನಡ ಭಾಷೆಯ ನುಡಿಗಟ್ಟುಗಳ ಮತ್ತು ಪದಗುಚ್ಛಗಳ ಜ್ಞಾನ
2. ಕನ್ನಡ ಭಾಷೆಯ ಸಮಾನಾರ್ಥಕ ಹಾಗೂ ವಿರುದ್ಧ ಪದಗಳ ಜ್ಞಾನ
3. ಕನ್ನಡ ಭಾಷೆಯ ಬಳಕೆಯಲ್ಲಿ ಮತ್ತು ಅನ್ವಯಿಕೆಯಲ್ಲಿ ಕಂಡುಬರುವ ಸಾಮಾನ್ಯ ದೋಷಗಳ ಜ್ಞಾನ
4. ಕನ್ನಡ ಭಾಷೆಯ ಬಳಕೆಯಲ್ಲಿ ಕಂಡುಬರುವ ಹೊಸ ಪ್ರವೃತ್ತಿಗಳು ಹಾಗೂ ಪರಿಕಲ್ಪನೆಗಳ ಬಗೆಗಿನ ಜ್ಞಾನ
5. ಕನ್ನಡ ಭಾಷೆಯ ಆಡಳಿತಾತ್ಮಕ ಪರಿಭಾಷೆಗಳ ಜ್ಞಾನ
6. ಕನ್ನಡ ಭಾಷೆಯಲ್ಲಿ ಕಾನೂನು ಪರಿಭಾಷೆಗಳ ಜ್ಞಾನ

### ಘಟಕ– III ಕನ್ನಡ ಭಾಷೆಯಲ್ಲಿ ಬಳಕೆ ಮಾಡುತ್ತಿರುವ ಇತರ ಭಾಷೆಗಳ ಪರಿಭಾಷೆಯ ಜ್ಞಾನ

1. ಕನ್ನಡ ಭಾಷೆಯಲ್ಲಿ ಬಳಕೆ ಮಾಡುತ್ತಿರುವ ಇತರ ಭಾಷೆಗಳ ಆಡಳಿತಾತ್ಮಕ ಪರಿಭಾಷೆಯ ಜ್ಞಾನ
2. ಕನ್ನಡ ಭಾಷೆಯಲ್ಲಿ ಬಳಕೆ ಮಾಡುತ್ತಿರುವ ಇತರ ಭಾಷೆಗಳ ಕಾನೂನು ಮತ್ತು ನ್ಯಾಯಿಕ ಪರಿಭಾಷೆಯ ಜ್ಞಾನ

**ಮುಂದುವರಿದಿದೆ..**

**ಘಟಕ– IV ಕೆಳಗೆ ನೀಡಲಾಗಿರುವ ನಿಘಂಟುಗಳ ಬಗೆಗಿನ ಸಾಮಾನ್ಯ ಜ್ಞಾನ**

1. ಆಡಳಿತ ಪದಕೋಶ
2. ಕಾನೂನು ಪದಕೋಶ
3. ವೈದ್ಯಕೀಯ ಪದಕೋಶ
4. ಕೃಷಿ ಪದಕೋಶ
5. ವಿಜ್ಞಾನ ಮತ್ತು ತಂತ್ರಜ್ಞಾನದ ಪದಕೋಶ
6. ಪರಿಸರ ನಿಘಂಟು
7. ಆಂಗ್ಲ–ಕನ್ನಡ ನಿಘಂಟು ಮತ್ತು ಕನ್ನಡ–ಆಂಗ್ಲ ನಿಘಂಟು ಹಾಗೂ ಇತರ ಮುಖ್ಯ ನಿಘಂಟುಗಳು.

## ಪತ್ರಿಕೆ–2 (ಮೂರು ಗಂಟೆಗಳು)

**ಭಾಷಾಂತರ ಜ್ಞಾನದ ಪರೀಕ್ಷೆ**

**ಘಟಕ–1 ಕಾನೂನು ಭಾಷೆಯ ಜ್ಞಾನ**

1. ಭಾರತ ಸಂವಿಧಾನದಲ್ಲಿ ಮತ್ತು ಇತರ ಮುಖ್ಯವಾದ ಅಧಿನಿಯಮಗಳು ಮತ್ತು ನಿಯಮಗಳಲ್ಲಿ ಬಳಕೆ ಮಾಡಲಾಗಿರುವ ಕನ್ನಡ ಮತ್ತು ಆಂಗ್ಲ ಭಾಷೆಗಳ ಪದಗಳ, ನುಡಿಗಟ್ಟುಗಳ, ವಾಕ್ಯಗಳ ಮತ್ತು ಖಂಡಗಳ ಬಗೆಗಿನ ಜ್ಞಾನ.

**ಘಟಕ–2: ಕರ್ನಾಟಕ ಸರ್ಕಾರದ ಆಡಳಿತಾತ್ಮಕ ವಿಷಯಗಳ ಭಾಷಾಂತರದ ಸಂಬಂಧದಲ್ಲಿನ ಜ್ಞಾನ**

1. ಕರ್ನಾಟಕ ಶಾಸಕಾಂಗದ ವ್ಯವಹರಣೆಗಳಿಗೆ ಸಂಬಂಧಿಸಿದ ವಿಷಯಗಳ ಭಾಷಾಂತರದ ಬಗೆಗಿನ ಜ್ಞಾನ.
2. ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಭಾಷಾಂತರ ಜ್ಞಾನ.

**ಘಟಕ–3: ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳ ನ್ಯಾಯಿಕ ವಿಷಯಗಳಲ್ಲಿ ಭಾಷಾಂತರದ ಜ್ಞಾನ**

1. ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳ ವ್ಯವಹರಣೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಭಾಷಾಂತರದ ಜ್ಞಾನ.
2. ತೀರ್ಪುಗಳ, ಐತೀರ್ಪುಗಳ, ಹೇಳಿಕೆಗಳ, ವಿವಾದಗಳ, ಆರೋಪಗಳ ಮತ್ತು ಇತರ ನ್ಯಾಯಾಲಯದ ಆದೇಶಗಳ ಬಗೆಗೆ ಭಾಷಾಂತರದ ಜ್ಞಾನ.

**ಮುಂದುವರಿದಿದೆ..**

**8.** **ಅರ್ಜಿ ಮತ್ತು ಶುಲ್ಕವನ್ನು ಸಲ್ಲಿಸುವ ವಿಧಾನ:** ಅರ್ಜಿಯನ್ನು ಸಲ್ಲಿಸುವ ವಿಧಾನವು ವೆಬ್‌ಸೈಟ್‌ನ ಅನುಬಂಧದಲ್ಲಿ ಲಭ್ಯವಿರುವ ಮಾಹಿತಿಗಳಿಗೆ ಅನುಸಾರವಾಗಿ ಇರತಕ್ಕದ್ದು. ಈ ಮುಂದಿನ ವೆಬ್‌ಸೈಟ್‌ನ **http://karnatakajudiciary.kar.nic.in/recruitment.asp** ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. **ಆನ್‌ಲೈನ್ ಮೂಲಕವಲ್ಲದೆ ಇತರೆ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

(ಎ) ಸಾಮಾನ್ಯ ವರ್ಗದ ಅಭ್ಯರ್ಥಿಗಳು ಹಾಗೂ ಇತರೆ ಪ್ರವರ್ಗದ ಅಭ್ಯರ್ಥಿಗಳು, II–ಎ/ II–ಬಿ/ III–ಎ/ III–ಬಿ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು ಹುದ್ದೆಗೆ ಸಂಬಂಧಿಸಿದಂತೆ ನಿಗದಿಪಡಿಸಿದ **500/– ರೂ.ಗಳು (ಐನೂರು ರೂ.ಗಳು ಮಾತ್ರ)** ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–I ಕ್ಕೆ ಸೇರಿದ ಹಾಗೂ ದೈಹಿಕ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು **250/– ರೂ.ಗಳು (ಇನ್ನೂರ ಐವತ್ತು ರೂ.ಗಳು ಮಾತ್ರ)** ಅರ್ಜಿ ಶುಲ್ಕವನ್ನು, ಈ ಮುಂದಿನ ಯಾವುದೇ ವಿಧಾನಗಳ ಮೂಲಕ ಸಂದಾಯ/ ಪಾವತಿ ಮಾಡತಕ್ಕದ್ದು :

**(i)** **ಆನ್‌ಲೈನ್ ಮೂಲಕ ಶುಲ್ಕ ಸಂದಾಯ:** ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಅರ್ಜಿಯಲ್ಲಿ ಸೂಚಿಸದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

**ಅಥವಾ**

**(ii)** **ಚಲನ್ ನಮೂನೆಯಲ್ಲಿ ಶುಲ್ಕ ಸಂದಾಯ:** ಅಭ್ಯರ್ಥಿಗಳು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಅರ್ಜಿಯಲ್ಲಿ ಸೂಚಿಸದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಪಿ.ಡಿ.ಎಫ್ ನಮೂನೆಯಲ್ಲಿ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡತಕ್ಕದ್ದು. (ನೀವು ಉಪಯೋಗಿಸುವ ಕಂಪ್ಯೂಟರ್ ಪಿ.ಡಿ.ಎಫ್ ಅಡೋಬ್–ರೀಡರ್, ಅಕ್ರೋಬ್ಯಾಟ್ ಸಪೋರ್ಟ್ ಹೊಂದಿರತಕ್ಕದ್ದು)

**ಮುಂದುವರಿದಿದೆ..**

(ಬಿ) ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಹಿಂತಿರುಗಿಸಲಾಗುವುದಿಲ್ಲ.

**9. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :**

ಆನ್‌ಲೈನ್ ಮೂಲಕ ನೋಂದಣಿಗಾಗಿ ಮತ್ತು ಅರ್ಜಿಯನ್ನು ಸಲ್ಲಿಸುವುದಕ್ಕಾಗಿ – **15.11.2017 (ರಾತ್ರಿ 11.59 ರವರೆಗೆ)**

ಆನ್‌ಲೈನ್ ಅಥವಾ ಚಲನ್ ಮೂಲಕ ಶುಲ್ಕವನ್ನು ಸಂದಾಯ ಮಾಡುವುದಕ್ಕಾಗಿ – **19.11.2017.**

**10. ಮೀಸಲಾತಿ ಕೋರುವ ಅಭ್ಯರ್ಥಿಗಳು :**

ಎ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ I/ II–ಎ/ II–ಬಿ/ III–ಎ/ III–ಬಿ ಪ್ರವರ್ಗಗಳಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರವು ನಿಗದಿಪಡಿಸಿದ ನಮೂನೆಯಲ್ಲಿ, ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

ಬಿ) ಗ್ರಾಮೀಣ/ಅಂಗವಿಕಲ/ಮಾಜಿ ಸೈನಿಕ/ ಕನ್ನಡ ಮಾಧ್ಯಮ/ ಯೋಜನಾ ನಿರಾಶ್ರಿತರು/ ವಿಧವೆ – ಕೋಟಾದಲ್ಲಿ ಮೀಸಲಾತಿಯನ್ನು ಕೋರಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

ಸಿ) ಸ್ಥಳೀಯ ವೃಂದ (ಅನುಚ್ಛೇದ 371–ಜೆ ಅಡಿಯಲ್ಲಿನ ಹೈದರಾಬಾದ್–ಕರ್ನಾಟಕ ಪ್ರದೇಶ) ದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರಿ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶ– ಅರ್ಹತಾ ಪ್ರಮಾಣ ಪತ್ರಗಳು) ನಿಯಮಗಳು, 2013ರಡಿಯಲ್ಲಿ ಗೊತ್ತುಪಡಿಸಿದಂತೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದಂದು ಅಥವಾ ಅದಕ್ಕೂ ಮುಂಚಿತವಾಗಿಯೇ ಸಕ್ಷಮ ಪ್ರಾಧಿಕಾರವು ನೀಡುವ ಯುಕ್ತ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

**ಮುಂದುವರಿದಿದೆ..**

ಡಿ) ಮೇಲಿನ ಕ್ರಮಸಂಖ್ಯೆ 10 (ಎ) (ಬಿ) ಮತ್ತು (ಸಿ) ಅಡಿಯಲ್ಲಿ ಸೌಲಭ್ಯಗಳನ್ನು ಕೋರಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡುವ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಥವಾ ಅದಕ್ಕೂ ಮೊದಲು ಹೊಂದಿರತಕ್ಕದ್ದು.

ಇ) ಕೇಂದ್ರ ಸರ್ಕಾರ /ರಾಜ್ಯ ಸರ್ಕಾರ ಮತ್ತು ಅವುಗಳ ಅಧೀನ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರವು ನೀಡಿರುವ **"ನಿರಾಕ್ಷೇಪಣಾ ಪ್ರಮಾಣ ಪತ್ರ"**ಗಳನ್ನು ಹೊಂದಿರತಕ್ಕದ್ದು. ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಮತ್ತು ನಂತರದ ಪರಿಶೀಲನೆಗಳ ಸಮಯದಲ್ಲಿ ಸದರಿ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

**11.** ದಾಖಲೆಗಳ ಪರಿಶೀಲನೆ/ಪರೀಕ್ಷೆಗೆ ಸಂಬಂಧಿಸಿದಂತೆ ಕರೆಯಲಾದ ಅಭ್ಯರ್ಥಿಗಳು ಪರಿಶೀಲನೆಗಾಗಿ ಶೈಕ್ಷಣಿಕ ವಿದ್ಯಾರ್ಹತೆ, ಜಾತಿ, ಹುಟ್ಟಿದ ದಿನಾಂಕಗಳಿಗೆ ಸಂಬಂಧಿಸಿದ ಅವಶ್ಯಕ ಮೂಲ ದಾಖಲೆಗಳನ್ನು (ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಜನ್ಮ ದಿನಾಂಕ ಹೊಂದಿರುವ ಅಂಕಪಟ್ಟಿ) ಮತ್ತು ಗ್ರಾಮೀಣ/ ಅಂಗವಿಕಲ / ಮಾಜಿ ಸೈನಿಕ/ ಕನ್ನಡ ಮಾಧ್ಯಮ / ಯೋಜನಾ ನಿರಾಶ್ರಿತರು / ವಿಧವೆ ಮತ್ತು ಸ್ಥಳೀಯ ವೃಂದಕ್ಕಾಗಿ ಮೀಸಲಾತಿಯನ್ನು ಕೋರುವವರು ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು. **ಪರಿಶೀಲನೆಯ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ ಆತನ/ ಆಕೆಯ ಅಭ್ಯರ್ಥಿಕೆಯು ರದ್ದಾಗುತ್ತದೆ ಮತ್ತು ಅವರ ವಿರುದ್ಧ ತಪ್ಪು ಮಾಹಿತಿಯನ್ನು ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ವ್ಯವಹರಣೆಯನ್ನು ಜರುಗಿಸಲಾಗುವುದು.**

ಮುಂದುವರಿದಿದೆ..

**12.** ಲಿಖಿತ ಪರೀಕ್ಷೆಗೆ / ಮೌಖಿಕ ಸಂದರ್ಶನಕ್ಕೆ ಕರೆಯಲಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

**13.** ಭಾಷಾಂತಕಾರರ ಹುದ್ದೆಗೆ ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳನ್ನು ಬೆಂಗಳೂರಿನಲ್ಲಿನ ಪ್ರಧಾನ ಪೀಠದಲ್ಲಾಗಲೀ ಅಥವಾ ಧಾರವಾಡ ಅಥವಾ ಕಲಬುರಗಿಳಲ್ಲಿನ ಪೀಠಗಳಲ್ಲಾಗಲೀ ನಿಯೋಜಿಸಬಹುದು.

**14.** ಅಭ್ಯರ್ಥಿಗಳು ಅಭ್ಯರ್ಥಿಕೆಯ ಸಂಬಂಧದಲ್ಲಿ ಅಧಿಕಾರಿಗಳು ಅಥವಾ ಅಧಿಕಾರಯೇತರರಿಂದ ಯಾವುದೇ ರೀತಿಯ ಬಾಹ್ಯ ಬೆಂಬಲವನ್ನು ಪಡೆಯುವ ಪ್ರಯತ್ನ ಮಾಡಿದಲ್ಲಿ ಅಂತಹ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು.

**ಮಾನ್ಯ ಮುಖ್ಯನ್ಯಾಯಮೂರ್ತಿಗಳ ಆದೇಶಾನುಸಾರ,**

**ಸಹಿ**
**(ಬಿ. ಜಯಂತ ಕುಮಾರ)**
**ವಿಲೇಖನಾಧಿಕಾರಿ (ನೇಮಕಾತಿ)**

## ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು

1. ಅಭ್ಯರ್ಥಿಗಳು, ಅರ್ಜಿ ಸಲ್ಲಿಸುವುದರಲ್ಲಿ ಆಗಬಹುದಾದ ತಪ್ಪುಗಳನ್ನು ತಡೆಯುವುದಕ್ಕಾಗಿ ಅರ್ಜಿ ಸಲ್ಲಿಸುವುದಕ್ಕಿಂತ ಮುಂಚೆ ಈ ಮುಂದೆ ಹೇಳಿರುವ ಎಲ್ಲಾ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು.

2. ಅಭ್ಯರ್ಥಿಯು, ಅರ್ಜಿಯನ್ನು ತುಂಬುವಾಗ, ತನ್ನನ್ನು ಯಾವ ಮೀಸಲಾತಿ ವೃಂದದಲ್ಲಿ ಪರಿಗಣಿಸಬೇಕೆಂದು ಇಚ್ಚಿಸುವನೊ/ಇಚ್ಚಿಸುವಳೋ ಅದನ್ನು ಅರ್ಜಿಯಲ್ಲಿ ಮೀಸಲಿರಿಸಿರುವ ಅಂಕಣದಲ್ಲಿನ ಉಳಿದ ಮೂಲವೃಂದ / ಸ್ಥಳೀಯ ವೃಂದವೆಂದು ಸ್ಪಷ್ಟವಾಗಿ ಗುರುತು ಮಾಡತಕ್ಕದ್ದು. ನಂತರ, ಅರ್ಜಿಯಲ್ಲಿ ಕೋರಿರುವ ಉಳಿದ ಮೂಲವೃಂದ /ಸ್ಥಳೀಯ ವೃಂದವನ್ನು ಬದಲಾಯಿಸಿಕೊಳ್ಳುವುದಕ್ಕೆ ಅನುಮತಿಸಲಾಗುವುದಿಲ್ಲ. (ಸ್ಥಳೀಯ ವೃಂದವೆಂದರೆ ಹೈದರಬಾದ್ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾದ ವೃಂದ )

3. ಅರ್ಜಿಯಲ್ಲಿ ಸಂಪರ್ಕದ ಉದ್ದೇಶಕ್ಕೆ ಸಂಬಂಧಿಸಿದಂತೆ ಕೊಟ್ಟಿರುವ ಸೂಕ್ತ ಕಾಲಂಗಳನ್ನು ತುಂಬುವಾಗ ಸಂವಹನಕ್ಕಾಗಿ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐ.ಡಿ (ಕಡ್ಡಾಯ) ಅದನ್ನು ಸರಿಯಾಗಿ ನಮೂದಿಸತಕ್ಕದ್ದು. ಸರಿಯಾದ ಮಾಹಿತಿ ಒದಗಿಸದೆ ಎಸ್.ಎಂ.ಎಸ್ ಅಥವಾ ಈ–ಮೇಲ್ ಸಂದೇಶ ಬರದಿದ್ದಲ್ಲಿ ಪ್ರಾಧಿಕಾರ ಹೊಣೆಯಾಗುವುದಿಲ್ಲ.

4. ಕೊನೆ ಕ್ಷಣದಲ್ಲಿ, ಅರ್ಜಿ ಸಲ್ಲಿಸುವಾಗ ಆಗಬಹುದಾದ ಒತ್ತಡವನ್ನು ತಪ್ಪಿಸಲು, ಅಭ್ಯರ್ಥಿಗಳು ಸಾಕಷ್ಟು ಮುಂಚಿತವಾಗಿಯೇ ಅರ್ಜಿ ಸಲ್ಲಿಸುವುದು ಸೂಕ್ತ ಅಂದರೆ ದಿನಾಂಕ 15.11.2017 ವರೆಗೆ ರಾತ್ರಿ 11.59 ಗಂಟೆಯೊಳಗೆ ಸಲ್ಲಿಸಿದ ಅರ್ಜಿಗಳನ್ನಷ್ಟೇ ಅಂಗೀಕರಿಸುತ್ತದೆ.

5. ಅಭ್ಯರ್ಥಿಯ ಲಿಖಿತ ಪರೀಕ್ಷೆ ಅಥವಾ ಅನ್ಯಥಾ ಮೌಖಿಕ ಸಂದರ್ಶನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ಧಾರವೇ ಅಂತಿಮವಾಗಿರುತ್ತದೆ

ಮುಂದುವರೆದಿದೆ..

6. ಅರ್ಹ ಅಭ್ಯರ್ಥಿಗಳ ಮೊಬೈಲ್ ಗೆ ಸಂದೇಶವನ್ನು ಕಳುಹಿಸುವ ಮೂಲಕ ಅಥವಾ ಇ–ಮೇಲ್ ವಿಳಾಸ ನೀಡಿದ್ದಲ್ಲಿ ಇ–ಮೇಲ್ ಮೂಲಕ ಮಾಹಿತಿಯನ್ನು ನೀಡಲಾಗುವುದು. "ಕರೆ ಪತ್ರ" ಅನ್ನು ಡೌನ್ ಲೋಡ್ ಮಾಡಿಕೊಳ್ಳುವುದಕ್ಕಾಗಿ, ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು **www.karnatakajudiciary.kar.in/recruitment.asp** ಎಂಬ ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿಯೂ ಸಹ ಅಧಿಸೂಚಿಸಲಾಗುವುದು. ಅಭ್ಯರ್ಥಿಯು ಲಿಖಿತ ಪರೀಕ್ಷೆ / ಮೌಖಿಕ ಸಂದರ್ಶನ ಸಮಯದಲ್ಲಿ ಆತನ/ಆಕೆಯ "ಕರೆ ಪತ್ರ" ವನ್ನು ತರತಕ್ಕದ್ದು.

7. ಅಭ್ಯರ್ಥಿಯು, ಲಿಖಿತ ಪರೀಕ್ಷೆ / ಮೌಖಿಕ ಸಂದರ್ಶನಕ್ಕೆ ಅರ್ಹನಾಗಿದ್ದ ಪಕ್ಷದಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯವು ನಿರ್ಧರಿಸಿದ ಮತ್ತು ಅಧಿಸೂಚಿಸಿದ ಸ್ಥಳ ಮತ್ತು ಸಮಯಕ್ಕೆ ಸರಿಯಾಗಿ ಅವರು ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

8. ಅರ್ಜಿದಾರರು ಪರಿಶೀಲನೆಯ ಸಂಬಂಧ ಲಿಖಿತ ಪರೀಕ್ಷೆ/ಮೌಖಿಕ ಸಂದರ್ಶನಕ್ಕೆ ಹಾಜರಾಗುವಾಗ "ಕರೆಪತ್ರ" ಮತ್ತು "ಗುರುತಿನ ಚೀಟಿ" ಆಧಾರದ (ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಪ್ಯಾನ್ ಕಾರ್ಡ್ ಅಥವಾ ಚಾಲನಾ ಪರವಾನಗಿ ಅಥವಾ ರೇಷನ್ ಕಾರ್ಡ್ ಅಥವಾ ಪಾಸ್‌ಪೋರ್ಟ್‌ನ್ನು ಮೂಲ ಪ್ರತಿಯಲ್ಲಿ ಗುರುತಿನ ಆಧಾರವಾಗಿ ಹಾಜರುಪಡಿಸಬಹುದು) ಪ್ರತಿಯನ್ನು ಹಾಜರುಪಡಿಸತಕ್ಕದ್ದು.

9. ಅರ್ಜಿದಾರರು ಸ್ವಯಂದೃಢೀಕೃತ ಛಾಯಾ ಪ್ರತಿಗಳ ಗುಚ್ಚದೊಂದಿಗೆ ಎಲ್ಲಾ ಮೂಲ ಯೋಗ್ಯತಾ ಪತ್ರಗಳನ್ನು ಎಂದರೆ, ಎಸ್.ಎಸ್.ಎಲ್.ಸಿ ಅಂಕಪಟ್ಟಿ/ ಹತ್ತನೇ ತರಗತಿ, ಸ್ನಾತಕ, ಸ್ನಾತಕೋತ್ತರ, ಜಾತಿ ಪ್ರಮಾಣಪತ್ರಗಳು ಯಾವುದೇ ಮೀಸಲಾತಿಯನ್ನು ಕ್ಲೇಮುಮಾಡುವ ಪ್ರಮಾಣಪತ್ರಗಳು, 2 ಪಾಸಾಪೋರ್ಟ್ ಅಳತೆಯ ಭಾವಚಿತ್ರಗಳು ಮತ್ತು ಪರಿಶೀಲನೆಗಾಗಿ ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನಕ್ಕೆ ಹಾಜರಾಗುವಾಗ ಮೂರು ನಡತೆ ಪ್ರಮಾಣಪತ್ರಗಳು (ಕಡೆಯದಾಗಿ ಅಧ್ಯಯನ ಮಾಡಿದ ಶಿಕ್ಷಣದ ಸಂಸ್ಥೆಯಿಂದ ಒಂದು ಮತ್ತು ಗೌರವಾನ್ವಿತ ವ್ಯಕ್ತಿಗಳಿಂದ ಎರಡು ಪ್ರಮಾಣಪತ್ರಗಳನ್ನು ಹಾಜರುಪಡಿಸತಕ್ಕದ್ದು.

ಮುಂದುವರೆದಿದೆ..

**10.** ಲಿಖಿತ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳ ಆಧಾರದ ಮೇಲೆ ಮೌಖಿಕ ಪರೀಕ್ಷೆಗೆ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ತಯಾರಿಸಲಾಗುವುದು.

**11.** ಲಿಖಿತ ಪರೀಕ್ಷೆ / ಅಥವಾ ಮೌಖಿಕ ಸಂದರ್ಶನ ಯಶಸ್ವಿಯಾದ ಮಾತ್ರಕ್ಕೆ ನೇಮಕಾತಿಯ ಯಾವ ಹಕ್ಕನ್ನು ಚಲಾಯಿಸತಕ್ಕದ್ದಲ್ಲ ಮತ್ತು ಅರ್ಜಿದಾರನು ಹುದ್ದೆಯ ನೇಮಕಾತಿಗೆ ಎಲ್ಲಾ ರೀತಿಗಳಲ್ಲಿ ಸಂಬಂಧಪಡುವಷ್ಟು ಸೂಕ್ತವಾದ ಅಗತ್ಯವೆಂದು ಪರಿಗಣಿಸಬಹುದಾದಂಥ ವಿಚಾರಣೆಗಳ ತರುವಾಯ ಹುದ್ದೆಗೆ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದ ಹೊರತು ನೇಮಕ ಮಾಡತಕ್ಕದ್ದು.

**12.** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :

ಆನ್‌ಲೈನ್ ಮೂಲಕ ನೋಂದಣಿಗಾಗಿ ಮತ್ತು ಅರ್ಜಿಯನ್ನು ಸಲ್ಲಿಸುವುದಕ್ಕಾಗಿ – **15.11.2017 (ರಾತ್ರಿ 11.59 ರವರೆಗೆ)**

ಆನ್‌ಲೈನ್ ಅಥವಾ ಚಲನ್ ಮೂಲಕ ಶುಲ್ಕವನ್ನು ಸಂದಾಯ ಮಾಡುವುದಕ್ಕಾಗಿ – **19.11.2017.** .

13. ಅಭ್ಯರ್ಥಿಯು, ಕರ್ನಾಟಕ ಉಚ್ಚ ನ್ಯಾಯಾಲಯವು ಅಧಿಸೂಚಿಸಬಹುದಾದಂಥ ಆನ್‌ಲೈನ್ ಬ್ಯಾಂಕಿಂಗ್ ವಿಧಾನದ ಮೂಲಕವಾಗಲಿ ಅಥವಾ ಚಲನ್ ನಮೂನೆ ಮೂಲಕವಾಗಲಿ ಅಧಿಸೂಚನೆಯಲ್ಲಿ ಸೂಚಿಸಬಹುದಾದಂಥ ಯುಕ್ತ ಅರ್ಜಿ ಶುಲ್ಕವನ್ನು ಸಂದಾಯ ಮಾಡತಕ್ಕದ್ದು. ಶುಲ್ಕವನ್ನು, ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್.ಬಿ.ಐ.) ಯಾವುದೇ ಶಾಖೆಯಲ್ಲಿ ಪಾವತಿ ಮಾಡತಕ್ಕದ್ದು.

ಮುಂದುವರೆದಿದೆ..

14. ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವಾಗ ಅಭ್ಯರ್ಥಿಯು, (ಗರಿಷ್ಠ 50 ಕೆ.ಬಿ. ಅಳತೆಯಿರುವ 5 ಸೆಂ.ಮೀ. ಉದ್ದ **x** 3.6 ಸೆಂ.ಮೀ. ಅಗಲವಿರುವ) ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಿಳಿಯ ಹಿನ್ನಲೆಯುಳ್ಳ ಭಾವಚಿತ್ರವನ್ನು ಸ್ಕ್ಯಾನ್ ಮಾಡತಕ್ಕದ್ದು ಹಾಗೂ ಜೆಪಿಜಿ ನಮೂನೆಯಲ್ಲಿ, ಬಿಳಿ ಕಾಗದದ ಮೇಲೆ ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ (2.5 ಸೆಂ.ಮೀ. ಉದ್ದ **x** 7.5 ಸೆಂ.ಮೀ. ಅಗಲವಿರುವ ಗರಿಷ್ಠ 25 ಕೆ.ಬಿ. ಪ್ರಮಾಣವಿರುವಂತೆ) ತನ್ನ ಸಹಿ ಮಾಡಿ ಸ್ಕ್ಯಾನ್ ಮಾಡತಕ್ಕದ್ದು ಹಾಗೂ ಅದನ್ನು ಅಪ್‌ಲೋಡ್ ಮಾಡತಕ್ಕದ್ದು.

15. ಅಭ್ಯರ್ಥಿಯು, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ (ಮೇಲೆ ನಿರ್ದಿಷ್ಟಪಡಿಸಿದ ದಾಖಲೆಗಳನ್ನು ಹೊರತುಪಡಿಸಿ) ಬೇರೆ ಯಾವುದೇ ಇತರ ಮೂಲ ದಾಖಲೆಗಳು/ ಪ್ರಮಾಣ ಪತ್ರಗಳ ಅಥವಾ ಪ್ರಮಾಣೀಕೃತ ಪ್ರತಿಗಳನ್ನು ಅಪ್‌ಲೋಡ್ ಮಾಡತಕ್ಕದ್ದಲ್ಲ.

16. ಆ ಹುದ್ದೆಗೆ, ಸಂಬಂಧಿಸಿದಂತೆ, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಯು, ಮೇಲೆ ಸೂಚಿಸಲಾದಂಥ ತನ್ನ ವಿದ್ಯಾರ್ಹತೆ ಹಾಗೂ ಇತರ ಮಾನದಂಡಗಳನ್ನು ಪೂರ್ಣಗೊಳಿಸಲಾಗಿದೆಯೆಂದು ಹಾಗೂ ತಾನು ಒದಗಿಸಿರುವ ಎಲ್ಲಾ ವಿವರಗಳು ಎಲ್ಲಾ ಆಯಾಮಗಳಲ್ಲೂ ಸರಿಯಾಗಿವೆಯೆಂದು ಖಚಿತಪಡಿಸತಕ್ಕದ್ದು. ನೇಮಕಾತಿಯ ಯಾವುದೇ ಹಂತದಲ್ಲಿ, ಅಭ್ಯರ್ಥಿಯು ವಿದ್ಯಾರ್ಹತೆಯ ಮಾನದಂಡಗಳನ್ನು ಪೂರ್ಣಗೊಳಿಸಿಲ್ಲವೆಂದು ಹಾಗೂ/ಅಥವಾ ಆತ/ಆಕೆ ಯಾವುದೇ ಪ್ರಮುಖ ವಾಸ್ತವಾಂಶಗಳನ್ನು ಮರೆಮಾಚಿರುತ್ತಾನೆ/ಳೆ, ತಿರುಚಿರುತ್ತಾನೆ/ಳೆ, ಮೊಟಕುಗೊಳಿಸಿರುತ್ತಾನೆ/ಳೆಂದು ಕಂಡುಬಂದ ಸಂದರ್ಭದಲ್ಲಿ ಆತನ/ಆಕೆಯ ಅಭ್ಯರ್ಥಿಕೆಯನ್ನು ರದ್ದುಗೊಳಿಸಲಾಗುವುದು. ಈ ಯಾವುದೇ ನ್ಯೂನ್ಯತೆಗಳು ನೇಮಕಾತಿಯ ನಂತರ ಕಂಡುಬಂದರೂ ಸಹ, ಅಭ್ಯರ್ಥಿಯ ಸೇವಾ ಕರಾರು ವಜಾಗೊಳ್ಳಲು ಬದ್ಧವಾಗಿರುತ್ತದೆ. ತಪ್ಪಾದ, ಅಪೂರ್ಣವಾದ ಅಥವಾ ಸರಿಯಿಲ್ಲದ ಮಾಹಿತಿಯನ್ನು ಒದಗಿಸುವುದು ಅನರ್ಹತೆಗೆ ಕಾರಣವಾಗುವುದು ಮಾತ್ರವಷ್ಟೇ ಅಲ್ಲದೆ, ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೂ ಸಹ ಅವಕಾಶ ಮಾಡಿಕೊಡುತ್ತದೆ.

ಸಹಿ
(ಬಿ. ಜಯಂತ ಕುಮಾರ)
ವಿಲೇಖನಾಧಿಕಾರಿ (ನೇಮಕಾತಿ)